# ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ವಿಶೇಷ ನ್ಯಾಯಾಲಯ, ಬಾಗಲಕೋಟೆ

**Spl.Case No.3/2020**

| | | | |
|---|---|---|---|
| ಹೆಸರು | : | ಬಶೀರಹ್ಮದ ಮುಲ್ಲಾ | ಫ್ರಾಸಾ-42 |
| ತಂದೆಯ ಹೆಸರು | : | ಪೀರಭಾಷಾ | ಚಾಸಾ-115 |
| ವಯಸ್ಸು | : | 36 ವರ್ಷ | |
| ಉದ್ಯೋಗ | : | ಫೋಟೊಗ್ರಾಫರ | |
| ವಿಳಾಸ | : | ಶಿರೋಳ ತಾಃ ಮುಧೋಳ | |

ದಿಃ 28.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

ದಿನಾಂಕ 17.10.2019 ರಂದು ಘಟನಾ ಸ್ಥಳಕ್ಕೆ ಸಂಜೆ 3-40 ರಿಂದ 4-40 ಗಂಟೆವರೆಗೆ ಹೋಗಿ ಮೃತ ದೇಹ ಬಿದ್ದ ಜಾಗದಲ್ಲಿ ಛಾಯಾ ಚಿತ್ರ ತೆಗೆದಿದ್ದು ಇದೆ. ಡಿವೈಎಸ್‌ಪಿ ಆರ್. ಕೆ ಪಾಟೀಲ ಸಿಬ್ಬಂದಿಯೊಂದಿಗೆ ನನಗೆ ಬರ ಮಾಡಿಕೊಂಡಿದ್ದು ನಾನು ಛಾಯಾ ಚಿತ್ರಗಳನ್ನು ತೆಗೆದಿದ್ದೇನೆ. ಸದರಿ ಪೋಟೊಗಳನ್ನು ಈಗ ನೋಡಿದ್ದು ನಿ.ಪಿ 25 ರಿಂದ 35 ಹಾಗೂ 37 ರಿಂದ 45 ರವರೆಗೆ ತನಿಖಾಧಿಕಾರಿ ತನಿಖೆ ಮಾಡುವಾಗ ಛಾಯಾ ಚಿತ್ರಗಳನ್ನು ತೆಗೆದಿದ್ದೇನೆ ಅವುಗಳನ್ನು ಈಗ ನೋಡಿದ್ದು ಇದೆ. ದಿನಾಂಕ 17.10.2019 ರಂದು 3.30 ರಿಂದ ನಿ.ಪಿ 16 ರಿಂದ 22, 40, 32 ನ್ನು ಗುನ್ನಾ ಸ್ಥಳದಲ್ಲಿ ತೆಗೆದಿದ್ದೇನೆ. ದಾಲ್ಮಿಯಾ ಸಿಮೆಂಟ್ ಪ್ಯಾಕ್ಟರಿ ಬಳಿ ನಿ.ಪಿ 26 ರಿಂದ 33 ತೆಗೆದಿದ್ದೇನೆ. ನಂತರ ಗುನ್ನಾ ಸ್ಥಳದಲ್ಲಿಯೇ ನಿ.ಪಿ 37, 38, 41, 42, 43 ದ 44 ಮತ್ತು 45 ನ್ನು ತೆಗೆದಿದ್ದೇನೆ. ಈ ಕುರಿತು ತನಿಖಾಧಿಕಾರಿ ಮುಂದೆ ನಿ.ಪಿ 88 ರಂತೆ ಶಪಥ ಪತ್ರ ನೀಡಿದ್ದೇನೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ 88(ಎ) ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಎಸ್.ಸಿ.ಹೆಚ್. ವಕೀಲರಿಂದ ಆರೋಪಿ ಪರ**

ನಾನು ಲೈಸೆನ್ಸ ಪಡೆದು ಸ್ಟುಡಿಯೋ ನಡೆಸುತ್ತೇನೆ. ನಾನು ಲೈಸೆನ್ಸ ಈಗ ತಂದಿಲ್ಲ. ನಾನು ಒಟ್ಟು ಮೂರು ಕ್ಯಾಮೆರಾ ತೆಗೆಯಲು ಉಳಿಸಿಕೊಂಡಿದ್ದೇನೆ. ನನಗೆ ಲಿಖಿತ ನೋಟಿಸ್ ನೀಡಿದ್ದಾರ ಎಂದರೆ ನೀಡಿಲ್ಲ ಪೋನ ಮಾಡಿದ್ದಾರೆ. ನನ್ನ ಪೋನ ನಂಬರ ಪೋಲಿಸರಿಗೆ ಮೊದಲಿಂದಲೂ ಇದೆ. ನಾನು ಪೋಟೊ ತೆಗೆಯಲು 3-45 ರಿಂದ 4-30 ರವರೆಗೆ ಪೋಟೊ ತೆಗೆದಿದ್ದೇನೆ. ಪೋಲಿಸರ ವಾಹನದಲ್ಲಿ ನಾನು ಸಂಚರಿಸಿದ್ದು ಇದೆ. ಸದರಿ ಪೋಟೊಗಳನ್ನು ವೆಂಕಟೇಶ್ವರ ಕಲರ್ ಲ್ಯಾಬ್ನಲ್ಲಿ ಪ್ರಿಂಟ್ ಹಾಕಿಸಿರುತ್ತೇನೆ. ಅದರ ಬಿಲ್ಲು ವಗೈರೆ ಪೋಲಿಸರಿಗೆ ಕೊಟ್ಟಿರುತ್ತೇನೆ. ನಿ.ಪಿ 88 ನ್ನು ನಾನು ಹೇಳಿ ಬರೆಸಿಲ್ಲ ಅವರು ತಯಾರಿಸಿದ್ದಕ್ಕೆ ಸಹಿ ಮಾಡಿರುತ್ತೇನೆ.

ಮರು ಸವಾಲು ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

<u>ನಾಲ್ಕನೇ ಹೆಚ್ಚುವರಿ **ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**</u>

<u>**ವಿಶೇಷ ನ್ಯಾಯಾಲಯ, ಬಾಗಲಕೋಟೆ**</u>

<u>**Spl.Case No.3/2020**</u>

| | | | |
|---|---|---|---|
| ಹೆಸರು | : | ಜಗದೀಶ ಜೀರಗಾಳ | ಫ್ರಾಸಾ-41 |
| ತಂದೆಯ ಹೆಸರು | : | ನಿಂಗಪ್ಪ | ಚಾಸಾ-114 |
| ವಯಸ್ಸು | : | 49 ವರ್ಷ | |
| ಉದ್ಯೋಗ | : | ಫೋಟೊಗ್ರಾಫರ | |
| ವಿಳಾಸ | : | ಮುಧೋಳ | |

ದಿಃ 28.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕ 15.10.2019 ರಂದು ಘಟನಾ ಸ್ಥಳಕ್ಕೆ ಸಂಜೆ 7-00 ಗಂಟೆಗೆ ಹೋಗಿ ಮೃತ ದೇಹ ಬಿದ್ದ ಜಾಗದಲ್ಲಿ ಛಾಯಾ ಚಿತ್ರ ತೆಗೆದಿದ್ದು ಇದೆ. ಡಿವೈಎಸ್‌ಪಿ ಆರ್ ಕೆ ಪಾಟೀಲ ಸಿಬ್ಬಂದಿಯೊಂದಿಗೆ ನನಗೆ ಬರ ಮಾಡಿಕೊಂಡಿದ್ದು ನಾನು ಛಾಯಾ ಚಿತ್ರಗಳನ್ನು ತೆಗೆದಿದ್ದೇನೆ. ಸದರಿ ಪೋಟೊಗಳನ್ನು ಈಗ ನೋಡಿದ್ದು ನಿ.ಪಿ 5 ರಿಂದ 8 ಎಂದು ಈಗಾಗಲೇ ಗುರ್ತಿಸಲಾಗಿದೆ. ದಿನಾಂಕ 16.10.2019 ರಂದು ಡಿವೈಎಸ್ಪಿ ಹಾಗೂ ಸಿಬ್ಬಂದಿಯವರೊಂದಿಗೆ ಹೋಗಿದ್ದು ಮೃತದೇಹಗಳ ಛಾಯಾ ಚಿತ್ರ ತೆಗೆದಿದ್ದು ಇದೆ. ಅವುಗಳನ್ನು ಈಗಾಗಲೇ ನಿ.ಪಿ 9 ರಿಂದ 12 ಎಂದು ಗುರ್ತಿಸಲಾಗಿದೆ. ಸದರಿ ಮೃತ ದೇಹಗಳ ಛಾಯಾ ಚಿತ್ರಗಳನ್ನು ಈಗ ನೋಡಿದ್ದು ಅದನ್ನು ನಿ.ಪಿ 78 ರಿಂದ 87 ಎಂದು ಗುರ್ತಿಸಲಾಯಿತು. ಆ ಕುರಿತು ಪಂಚನಾಮೆ ಸಹ ತನಿಖಾಧಿಕಾರಿ ಮಾಡಿರುತ್ತಾರೆ. ದಿನಾಂಕ 31.10.2019 ರಂದು ಆ ಕುರಿತು ಪ್ರಮಾಣ ಪತ್ರ ತನಿಖಾಧಿಕಾರಿ ಮುಂದೆ ನೀಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ.ಎಸ್.ಸಿ.ಹೆಚ್. ವಕೀಲರಿಂದ ಆರೋಪಿ ಪರ**

ನಾನು ಲೈಸೆನ್ಸ ಪಡೆದು ಸ್ಟುಡಿಯೋ ನಡೆಸುತ್ತಿಲ್ಲ. ನನಗೆ ಲಿಖಿತ ನೋಟಿಸ್ ನೀಡಿದ್ದಾರ ಎಂದರೆ ಸಾಕ್ಷಿಯು ಸಿಬ್ಬಂದಿಯನ್ನು ಸ್ಥಳಕ್ಕೆ ಬರಲು ಕಳುಹಿಸಿರುತ್ತಾರೆ. ಅಂದು ನಾನು ಯಾವ ಕ್ಯಾಮೆರಾ ಪೋಟೊ ತೆಗೆಯಲು ಡಿ90 ಕ್ಯಾಮೆರಾ ತೆಗೆದುಕೊಂಡು ಹೋಗಿದ್ದೇನು. ಸದರಿ ಡಿಜಿಟಲ್ ಕ್ಯಾಮೆರಾದಲ್ಲಿ ತಾರೀಖು ಸಮಯ ಕಾಣಿಸಲು ಅವಕಾಶ ಇದೆ ಎಂದರೆ ಅವಕಾಶ ಇದೆ. ಈಗ ತೆಗೆದಿರುವ ಛಾಯಾ ಚಿತ್ರಗಳಲ್ಲಿ ಅದನ್ನು ಅಳವಡಿಸಿಲ್ಲ ಎಂದರೆ ಇಲ್ಲ.

ಮರು ದಿನ ಬರಲು ನನಗೆ ನೋಟಿಸ್ ನೀಡಿದ್ದಾರ ಎಂದರೆ ಇಲ್ಲ ಸಿಬ್ಬಂದಿ ಕರೆದುಕೊಂಡು ಹೋಗಿದ್ದಾರೆ. ಅಂದು ನಾನು ಯಾವ ಕ್ಯಾಮೆರಾ ತೆಗೆದುಕೊಂಡು ಹೋಗಿದ್ದ ಮಾಡೆಲ್ ಹೇಳಲಾರೆ. ಅದನ್ನು ಎಂದು ಎಲ್ಲಿ ಪ್ರಿಂಟ್ ಹಾಕಿಸಿದೇನೆ, ಆ ಕುರಿತು ಬಿಲ್ಲು ರಶೀದಿ ಇದೆಯೇ ಎಂದರೆ ಇಲ್ಲ. ನನ್ನ ಶಪಥ ಪತ್ರದಲ್ಲಿ ಎಂದು ಯಾವ ಯಾವ ಪೊಟೋ ತೆಗೆದಿದ್ದೇನೆ ಎಂಬ ವಿವರಗಳನ್ನು ನಮೂದಿಸಿಲ್ಲ ಎಂದರೆ ದಿನಾಂಕ 16.10.2019 ರಂದು ಮಾತ್ರ ನಮೂದಿಸಿದ್ದೇನೆ. ಸದರಿ ಶಪಥ ಪತ್ರದಲ್ಲಿ ಕ್ಯಾಮೆರಾ ಎಷ್ಟು ಜಿ ಬಿ ಇತ್ತು ಅದರ ವಿವರಗಳನ್ನು ದಾಖಲಿಸಿಲ್ಲ ಎಂದರೆ ಇಲ್ಲ. ಸದರಿ ಶಪಥ ಪತ್ರ ಯಾರು ತಯಾರು ಮಾಡಿದ್ದರೆ ಎಂದು ನನಗೆ ಗೊತ್ತಾ ಎಂದರೆ ಇಲ್ಲ. ಪೋಲಿಸರು ಸೂಚಿಸಿರುವಂತೆ ನಾನು ಸಹಿ ಮಾಡಿ ಕೊಟ್ಟಿದ್ದೇನೆ ಆ ರೀತಿ ಯಾವುದೇ ಪೋಟೊ ತೆಗೆದಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮಾತಿನಂತೆ ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಇಲ್ಲ. ನ್ಯಾಯಾಲಯದಲ್ಲಿರುವ ಪೋಟೊಗಳು ಸೃಷ್ಟನೆ ಮಾಡಿದ್ದೇನೆ ಎಂದರೆ ಇಲ್ಲ.

ಮರು ಸವಾಲು ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

ದಿಃ28.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಎಸ್.ಸಿ.ಹೆಚ್. ವಕೀಲರಿಂದ** ಆರೋಪಿ ಪರ

ಸದರಿ ಮೃತದೇಹಗಳ ಪರೀಕ್ಷೆ ಕಳುಹಿಸುವ ಪೂರ್ವ ಅವುಗಳ ಶರೀರದ ಮೇಲೆ ಚಿಕಿತ್ಸೆ ನೀಡಿರುವ ಕುರುಹು ಕಂಡು ಬಂತೆ ಎಂದರೆ ಇಲ್ಲ. ವಿಠ್ಠಲ ತಳಗೇರಿ ಕೈಗೆ ಆಗಿರುವ ಜಜ್ಜಿರುವ ಗಾಯ ವಾಹನ ಆ ರೀತಿ ಹಾದು ಹೋದರೆ ಅಥವಾ ಅತೀ ವೇಗದಿಂದ ರಭಸವಾಗಿ ಗಟ್ಟಿಯಾದ ವಸ್ತುವಿನ ಮೇಲೆ ಬಿದ್ದು ಸಂಪರ್ಕಕ್ಕೆ ಬಂದರೆ ಗಾಯ ಆಗಬಹುದು ಎಂದರೆ ಅವಕಾಶಗಳಿದೆ. ಸದರಿ ಮೃತ ದೇಹಗಳು ಯಾವ ರೀತಿ ಗಾಯಗಳು ಸಂಭವಿಸಿದ ಎನ್ನುವ ಬಗ್ಗೆ ಎಂಎಲ್ ಸಿ ನನ್ನ ಗಮನಕ್ಕೆ ಬಂದಿದೆಯೇ ಎಂದರೆ ಅದು ತನಿಖಾಧಿಕಾರಿ ಸಿ.ಎಂ.ಓ ಗೆ ತಿಳಿಸಿರುತ್ತಾರೆ. ಸದರಿ ಎಂ.ಎಲ್.ಸಿ ನನ್ನ ಎದುರು ಪರೀಕ್ಷೆಗೆ ಬಂದಾಗ ಲಗತ್ತು ಇತ್ತಾ ಎಂದರೆ ಇರುವುದಿಲ್ಲ. ಮೃತ ದೇಹ ನನ್ನ ವಶಕ್ಕೆ ನೀಡಿದ್ದಾಗ ಅವುಗಳ ಮೇಲೆ ಏನೆನು ಇತ್ತು ಎಂದು ನಿ.ಪಿ 75 ಮತ್ತು 76 ನಮೂದು ಮಾಡಲಾಗಿದೆಯೇ ಎಂದರೆ ಮಾಡಿಲ್ಲ. ಸಾಕ್ಷಿಯು ಮುಂದುವರೆದು ಅದರ ಮೇಲೆ ದೋತರಾ ಶರ್ಟು ಇತ್ತು. ನಾನು ಆ ಕುರಿತು ದಾಖಲೆ ತಂದಿದೇನಾ ಎಂದರೆ ತಂದಿಲ್ಲ. ಎರಡು ಮೃತ ದೇಹಗಳ ಮೇಲೆ ಬಲ ಬದಿಯಲ್ಲಿಯೇ ಗಾಯಗಳು ಕಂಡು ಬರುತ್ತವೆ ಎಂದರೆ ಹೌದು. ನಾನು ಗಮನಿಸಿದ ಗಾಯಗಳು ಜೋರಾಗಿ ಮೋಟಾರ ಸೈಕಲನಲ್ಲಿ ಹೋಗುವಾಗ ಅಫಘಾತಕ್ಕಿಡಾದಾಗ ಆಗುವ ಸಾಧ್ಯತೆಗಳು ಇವೆ ಎಂದರೆ ಅವಕಾಶ ಇಲ್ಲ. ರಕ್ತಸ್ರಾವದಿಂದ ಯಾವುದೇ ಸೂಕ್ತ ಚಿಕಿತ್ಸೆ ಕೂಡಲೇ ಸಿಗದಿದ್ದರೆ ಸಾವು ಸಂಭವಿಸುವ ಸಾಧ್ಯತೆ ಇದೆ ಎಂದರೆ ಇದೆ. ಸಾಕ್ಷಿಯು ಮುಂದುವರೆದು ಅಫಘಾತಗಳಿಂದ ಈ ರೀತಿ ಗಾಯಗಳಾಗಿ ರಕ್ತಸ್ರಾವ ಆಗುವುದಿಲ್ಲ. ನಾನು ತನಿಖಾಧಿಕಾರಿಯ ಕೋರಿಕೆಯ ಮೇರೆಗೆ ಹರಿತವಾದ ಆಯುಧದಿಂದ ಈ ರೀತಿ ಗಾಯಗಳು ಆಗಿವೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಇಲ್ಲ.

ಮರು ಸವಾಲು ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

<u>ನಾಲ್ಕನೇ ಹೆಚ್ಚುವರಿ **ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**</u>

<u>**ವಿಶೇಷ ನ್ಯಾಯಾಲಯ, ಬಾಗಲಕೋಟೆ**</u>

**<u>Spl.Case No.3/2020</u>**

| | | | |
|---|---|---|---|
| ಹೆಸರು | : | ಹೊಳೆಪ್ಪಗೌಡ ಪಾಟೀಲ | ಫ್ರಾಸಾ-40 |
| ತಂದೆಯ ಹೆಸರು | : | ರಾಜೇಂದ್ರಗೌಡ | ಚಾಸಾ-113 |
| ವಯಸ್ಸು | : | 45 ವರ್ಷ | |
| ಉದ್ಯೋಗ | : | ಪೊಲೀಸ ಇನ್ಸಪೆಕ್ಟರ, ಬನಹಟ್ಟಿ | |
| ವಿಳಾಸ | : | ಬನಹಟ್ಟಿ | |

ದಿಃ 28.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು ದಿನಾಂಕಃ 31.08.2019 ರಿಂದ 04.05.2022 ರವರೆಗೆ ಸಿ.ಪಿ.ಐ ಮುಧೋಳ ವೃತ್ತದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 17.10.2019 ರಂದು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಚಾಸಾ-126 ರವರ ಆದೇಶದ ಅನ್ವಯ ಹಿಡಿದು ತಂದು ಹಾಜರು ಪಡಿಸಿದ್ದೇನೆ. ಆ ಕುರಿತು ವರದಿಯನ್ನು ನೀಡಿದ್ದೇನೆ. ಸದರಿ ವರದಿಯನ್ನು ಈಗ ನೋಡಿದ್ದು ಅದನ್ನು ನಿಪಿ-77 ಎಂದು, ಸಾಕ್ಷಿಯ ಸಹಿಯನ್ನು ನಿಪಿ-77(ಎ) ಎಂದು ಗುರುತಿಸಲಾಯಿತು.

ದಿನಾಂಕಃ 26.11.2019 ರಂದು ಚಾಸಾ-127 ರವರ ಮುಂದೆ ಇದೇ ಪ್ರಕರಣದಲ್ಲಿ ನಾನು ಕರ್ತವ್ಯದಲ್ಲಿದ್ದಾಗ ದಿಃ 15.10.2019 ರಂದು ಚಾಸಾ-1, ಆತನ ತಾಯಿ ಸತ್ಯವ್ವ, ಆತನ ಸಂಬಂಧಿ ಮಹಾಂತೇಶ ಗಚ್ಚಪ್ಪ ತಳಗೇರಿ ಹಾಗೂ ಇತರರು ಬಂದು ಅವರು ತಮ್ಮ ಊರಿನ ರಾಜು ಉರ್ಫ ಕಾಡಪ್ಪ ತಂ.ಮಲ್ಲಪ್ಪ ಮುಚ್ಚಂಡಿ ಉರ್ಫ ಬಾಡಿಗೆ ಇವರೊಂದಿಗೆ ಮಹಾಂತೇಶ ಗಚ್ಚಪ್ಪ ತಳಗೇರಿ ಈತನು ಹಣಕಾಸಿನ ವ್ಯವಹಾರ 1 ವರೆ ಲಕ್ಷ ಪಡೆದ ಬಗ್ಗೆ ತಿಳಿಸಿದ್ದು ಅದನ್ನು ಕೇಳಿದರೆ ವಾಪಸ್ಸು ಕೊಡುತ್ತಿಲ್ಲ

ಎನ್ನುವ ಬಗ್ಗೆ ಅವನ ಸಹಾಯಕ್ಕೆ 1 ನೇ ಆರೋಪಿ, ಕಾಡಪ್ಪ ಕಣಗಲ್ಲ, ವಿಠ್ಠಲ ಕಣಗಲ್ಲ, ಲಕ್ಷ್ಮಣ ಜಕ್ಕನವರ, ರೇವಪ್ಪ ಚಿಂಚಲಿ ರವರು ಕಾಡಪ್ಪನ ಸಹಾಯಕ್ಕೆ ನಿಂತ್ತಿದ್ದಾರೆಂದು ತಿಳಿಸಿದ್ದ. ಆ ಕುರಿತು ಹೇಳಿಕೆ ಕೊಟ್ಟಿದ್ದೇನೆ. ನಾನು ಶಿರೋಳ ಗ್ರಾಮದ ಹಿರಿಯರಾದ ಮಹೇಶ ಕಾಡಪ್ಪ ನಾಗರೆಡ್ಡಿ ಗೆ ಫೋನ್ ಮಾಡಿದಾಗ ಆತನ ಸಿಗಲಿಲ್ಲ. ಬೀಟ ಸಿಬ್ಬಂದಿ ಸಂಗಪ್ಪ ಕೋಟಿ ರಜೆಯಲ್ಲಿದ್ದ ಎಂದು ತಿಳಿಸಿದ್ದ. ಅದರಂತೆ ನಾನು ಮುಧೋಳ ಠಾಣೆಗೆ ಹೋಗಿ ದೂರು ಕೊಡಲು ಸೂಚಿಸಿದ್ದೆ. ಆ ಕುರಿತು ಫೋನ್ ನಲ್ಲಿ ಸಹ ಪಿ.ಎಸ್.ಐ ಹೇಳಿದ ವಿಚಾರ ತನಿಖಾಧಿಕಾರಿಗೆ ಹೇಳಿದ್ದೆ. ಅದೇ ದಿನ ಸಂಜೆ 5.00 ಗಂಟೆ ವೇಳೆಗೆ ವಿಠ್ಠಲ ಭರಮಪ್ಪ ತಳಗೇರಿ, ಮಲ್ಲೆಪ್ಪ ಸಂತಪ್ಪ ತಳಗೇರಿ ಕೊಲೆಯಾಗಿರುವ ಬಗ್ಗೆ ತಿಳಿದು ಬಂತು. ನಾನು ತನಿಖಾಧಿಕಾರಿ ಜೊತೆಗೆ ಸ್ಥಳಕ್ಕೆ ಸಹ ಭೇಟಿ ನೀಡಿದ್ದೇನೆ.

**ಪಾಟೀ ಸವಾಲುಃ ಶ್ರೀ.ಎಸ್.ಸಿ.ಹೆಚ್. ವಕೀಲರಿಂದ ಆರೋಪಿ ಪರ**

ನನಗೆ ಆರೋಪಿಯನ್ನು ಪತ್ತೆ ಮಾಡಲು ಲಿಖಿತ ಆದೇಶ ಕೊಟ್ಟಿಲ್ಲ. ಮೌಖಿಕ ಆದೇಶ ಮಾಡಿದ್ದರು. ನನಗೆ ಎಫ್.ಐ.ಆರ್. ದಲ್ಲಿ ಇರುವಂತೆ ಪ್ರಕರಣದ ಎಲ್ಲ ಆರೋಪಿತರನ್ನು ಹಿಡಿದು ತರಲು ಸೂಚಿಸಿದ್ದು ಆರೋಪಿತರ ಚಹರೆ ಪಟ್ಟಿ ನೀಡಿರಲಿಲ್ಲ. ಆರೋಪಿ-14, 15 ಎಫ್.ಐ.ಆರ್. ಆದಾಗ ಅವರ ಹೆಸರು ಅದರಲ್ಲಿ ಇರಲಿಲ್ಲ. ನಾನು ವರದಿ ಮಾಡಿರುವಂತೆ ಆರೋಪಿತರನ್ನು ನಾನು ಹಿಡಿದು ತಂದಿಲ್ಲ ಆ ಕುರಿತು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಇಲ್ಲ. ಸದರಿ ದಿನ ಹಣಕಾಸಿನ ವ್ಯವಹಾರದ ಬಗ್ಗೆ ನನ್ನ ಬಳಿ ಬಂದಾಗ ನಾನು ಸಿವಿಲ್ ಪ್ರಕರಣವಾಗುತ್ತದೆ ಎಂದು ಹಿಂಬರಹ ನೀಡಿದ್ದೇನಾ ಎಂದರೆ ಸಾಕ್ಷಿ ಇಲ್ಲ ಠಾಣಾಧಿಕಾರಿ ಬಳಿ ಹೋಗಲು ಹೇಳಿದ್ದೆ. ನಾನು ಮಲ್ಲೆಪ್ಪ, ವಿಠ್ಠಲ ರವರ ಕೊಲೆಯಾಗಿರುವ ಬಗ್ಗೆ ತಿಳಿದುಬಂತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಈಗ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಹಣ ವಾಪಸ್ಸ ನೀಡದಿರಲು ಕಾಡಪ್ಪ ಕಣಗಲ್ಲ, ವಿಠ್ಠಲ ಕಣಗಲ್ಲ, ಲಕ್ಷ್ಮಣ ಜಕ್ಕನವರ,

ರೇವಪ್ಪ ಚಿಂಚಲಿ ರವರು 1 ನೇ ಆರೋಪಿ ಕಾಡಪ್ಪನ ಸಹಾಯಕ್ಕೆ ನಿಂತ್ತಿದ್ದಾರೆಂದು ಸುಳ್ಳು ಹೇಳಿದ್ದೇನೆಂದರೆ ಇಲ್ಲ. ನಾನು ಉಲ್ಲೇಖಿತ ವ್ಯಕ್ತಿಗಳನ್ನು ನೋಟೀಸ ನೀಡಿ ಕರೆಸುವ ಪ್ರಯತ್ನ ಮಾಡಿಲ್ಲ. ನನ್ನ ಹೇಳಿಕೆಯನ್ನು ತನಿಖಾಧಿಕಾರಿ ಅನುಕೂಲಕ್ಕೆ ಸೃಷ್ಟಣೆ ಮಾಡಿಕೊಂಡಿದ್ದೇವೆ ಎಂದರೆ ಇಲ್ಲ.

ಮರು ಸವಾಲು ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

# ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ವಿಶೇಷ ನ್ಯಾಯಾಲಯ, ಬಾಗಲಕೋಟೆ

**Spl.Case No.3/2020**

| | | | |
|---|---|---|---|
| ಹೆಸರು | : | ಡಾಃ ವಿಜಯ್ ದಾದೆಸಾಹೇಬ ಕುಂಟೋಜಿ | ಫ್ರಾಸಾ-39 |
| ತಂದೆಯ ಹೆಸರು | : | ಮೊಹಿಯುದ್ದೀನ್ | ಚಾಸಾ-117 |
| ವಯಸ್ಸು | : | 50 ವರ್ಷ, | |
| ಉದ್ಯೋಗ | : | ಹಿರಿಯ ತಜ್ಞರು ಜಿಲ್ಲಾ ಆಸ್ಪತ್ರೆ ವಿಜಯಪುರ | |
| ವಿಳಾಸ | : | ವಿಜಯಪುರ | |

ದಿಃ 28.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

ನಾನು ದಿನಾಂಕಃ 07.07.2011 ರಿಂದ ದಿಃ 13.07.2025 ರವರೆಗೆ ಹಿರಿಯ ತಜ್ಞರು ಎಂದು ಜಿಲ್ಲಾ ಆಸ್ಪತ್ರೆ ಬಾಗಲಕೋಟೆಯಲ್ಲಿ ಕರ್ತವ್ಯ ನಿರ್ವಹಿಸಿದ್ದು ಇದೆ.

ದಿನಾಂಕಃ16.10.2019 ರಂದು ಮುಂಜಾನೆ 6.30 ಗಂಟೆಯಿಂದ 7.30 ಗಂಟೆ ಅವಧಿಯಲ್ಲಿ ವಿಠ್ಠಲ ಭರಮಪ್ಪ ತಳಗೇರಿ, ಶಿರೋಳ ವಾಸಿ ಹಾಗೂ ಮಳಿಯಪ್ಪ ಸಂತಪ್ಪ ತಳಗೇರಿ, ಶಿರೋಳ ವಾಸಿ ಅವರ ಮೃತ ದೇಹದ ಶವ ಪರೀಕ್ಷೆಯನ್ನು ಬೆಳಗಿನ ಜಾವಾ 5.30 ರಿಂದ 6.30 ರ ಅವಧಿಯಲ್ಲಿ ಮಾಡಿದ್ದೇನೆ.

ಸದರಿ ಮಳಿಯಪ್ಪ ಸಂತಪ್ಪ ತಳಗೇರಿ ಮೃತ ದೇಹದ ಮೇಲೆ ಗಮನಿಸಿದಂತೆ ತಲೆಯ ಬಲ ಹಣೆಯ ಮೇಲೆ 2X1 ಸಿಎಂ ಅಳತೆಯ ಊತ ಕಂಡು ಬಂತು. ಅದೇ ರೀತಿ ಕತ್ತರಿಸಿದ ಬಲಭುಜ ಗಂಟಿನ ಮೇಲೆ 12X6X8 ಸಿಎಂ ಅಳತೆಯ ರಕ್ತಗಾಯ ಆಗಿತ್ತು. ಅದೇ ರೀತಿ ಊದಿದ ಕುತ್ತಿಗೆ ಹಿಂಭಾಗದಲ್ಲಿ ಹರಿದ ಗಾಯ ಬಲಗಡೆಯಿಂದ ಎಡಗಡೆ 20X3X15 ಸಿಎಂ ವ್ಯಾಸದ ನೀಳವಾದ ಗಾಯ. ಬೆನ್ನು ಮೂಳೆ ಕತ್ತರಿಸಿ ಮಿದುಳಿನ ಮೂಲದ ವರೆಗೆ ಹೋಗಿತ್ತು. ಅದೇ ರೀತಿ ಊದಿಕೊಂಡ ಹರಿದ ಗಾಯ

ಎಡ ಅಂಗೈನಲ್ಲಿ 7X3 CM ಅಳತೆಯದ್ದು ಇತ್ತು. ಅದೇ ರೀತಿ ಇನ್ನೊಂದು ಬಲ ಅಂಗೈ ಹರಿದ ರಕ್ತಗಾಯ 6X4 CM ಕಂಡು ಬಂತು.

ಕುತ್ತಿಗೆಯ ಬೆನ್ನು ಮೂಳೆ ತುಂಡರಿಸಿತ್ತು. ಮಿದುಳು ರಕ್ತಹೀನವಾಗಿತ್ತು. ಸದರಿ ಗಾಯಗಳು ಮರಣ ಪೂರ್ವ ಇದ್ದು ಹರಿತವಾದ ಆಯುಧದಿಂದ ಆಗುವ ಸಾಧ್ಯತೆ ಇದೆ. ಸಾವು ಸಂಭವಿಸಲು ಕಾರಣ ಆಘಾತ ಹಾಗೂ ತೀವ್ರ ರಕ್ತಸ್ರಾವದಿಂದ ಸಂಭವಿಸಿದೆ ಎಂದು ಅಭಿಪ್ರಾಯ ಪಟ್ಟಿದ್ದೇನೆ.

ವಿಠ್ಠಲ ಭರಮಪ್ಪ ತಳಗೇರಿ ಮೃತ ದೇಹವನ್ನು 6.30 ರಿಂದ 7.30 ರ ಅವಧಿಯಲ್ಲಿ ಪರೀಕ್ಷಿಸಿದ್ದು ಸದರಿ ಮೃತ ದೇಹದ ಕುತ್ತಿಗೆಯ ಬಲಭಾಗದಲ್ಲಿ ಕತ್ತರಿಸಿದ ಗಾಯ 15X6X3 CM ಇತ್ತು. ಅದೇ ರೀತಿ ಇನ್ನೊಂದು ಗಾಯ ಮುಖದ ಬಲಭಾಗದಲ್ಲಿ 2X4 CM ಅಳತೆಯ ಕತ್ತರಿಸಿದ ರಕ್ತಸ್ರಾವದಿಂದ ಕೂಡಿದ ಗಾಯಕಂಡುಬಂತು. ಮೂಗು ತುಂಡರಿಸಿ ರಕ್ತಗಾಯ 2X1 CM ಇತ್ತು. ಬಲಗಿವಿ ರಕ್ತಸಿದ 4X3 CM ಅಳತೆಯ ರಕ್ತಗಾಯ ಇತ್ತು. ಎಡಕೈ ಎರಡು ತುಂಡುಗಳಾಗಿದ್ದು ರಕ್ತಸ್ರಾವದಿಂದ ಕೂಡಿತ್ತು. ಬಲ ಮುಂಗೈ ಜಜ್ಜಿ ತುಂಡಾಗಿತ್ತು. ಮೂಳೆ ಆಳದ ವರೆಗೆ ಅಸಹಜವಾಗಿ ರಕ್ತಸ್ರಾವದಿಂದ ಕೂಡಿದ್ದು ಇದೆ. ಎಡತೋಳು ಮುಂಭಾಗ ಕತ್ತರಿಸಿದ ರಕ್ತಗಾಯ 4X1 ಸಿಎಂ ಇತ್ತು.

ತಲೆಯ ಬುರುಡೆ ಹಾಗೂ ಬೆನ್ನುಹುರಿ ತುಂಡರಿಸಿತ್ತು. ಮಿದುಳು ಮೂಲ ತುಂಡರಿಸಿತ್ತು. ಮಿದುಳು ರಕ್ತಹೀನವಾಗಿತ್ತು. ಸದರಿ ಗಾಯಗಳು ಮರಣ ಪೂರ್ವ ಇದ್ದು ಆಘಾತ ಹಾಗೂ ರಕ್ತಸ್ರಾವದಿಂದ ಮರಣಹೊಂದಿದ್ದಾನೆಂದು ಅಭಿಪ್ರಾಯ ಪಟ್ಟಿದ್ದೆ. ಹರಿತವಾದ ಆಯುಧಗಳಿಂದ ಈ ರೀತಿ ಗಾಯ ಆಗುವ ಸಾಧ್ಯತೆ ಇವೆ. ಅವುಗಳನ್ನು ಕ್ರಮವಾಗಿ ನಿಪಿ-75, 76 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-75(ಎ), 76(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಪಾಟೀ ಸವಾಲಿಗಾಗಿ ಕಾಯ್ದಿರಿಸಲಾಗಿದೆ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.